ಶ್ರೀ ಕೆ. ಲಕ್ಕಪ್ಪ.—ಅಂಗೀಕೃತವಾದ ಲೈಸನ್ಸು ಪಡೆದಂತಹ ಹೇರು ಪ್ರೈಸನು ಡಿಪೋಗಳಿಗೆ ತಾವು ಭತ್ತವನ್ನು ಕೊಳ್ಳುವುದಕ್ಕೆ ಸೊಸೈಟಿಗಳಲ್ಲಿ ಮಾಡವೆ ಇದ್ದರೆ ಅಂತಹವರಿಗೆ ಅವಕಾಶ ಕೊಡತಕ್ಕ ಪರಿಸ್ಥಿತಿ ಏನಾದರೂ ಇದಯೇ ? ಅದಕ್ಕೆ ಅವಕಾಶ ಮಾಡಿಕೊಡುತ್ತೀರಾ ?

ಶ್ರೀ ಎಂ. ವಿ. ಕೃಷ್ಣಪ್ಪ.—ತಾಲ್ಲೂಕ್ ಮಾರ್ಕೆಟಿಂಗ್ ಕೋ-ಆಪರೇಟಿವ್ ಸೊಸೈಟಿಗಳ ಮೂಲಕವೇ ಎಲ್ಲವನ್ನೂ ಕೊಳ್ಳುತ್ತಾರೆ. ಅವರಿಗೆ ಎಲ್ಲ ಜವಾಬುದಾರಿಗಳೂ ಇವೆ. It has been entrusted with the job of distribution and procurement. Because, it is the mother Society in the Taluk.

Sri K. LAKKAPPA.—I want to know by way of supplementary. The Co-operative Societies do not come forth for procurement of rice or paddy. When that is so, what is the alternative ?

Sri M. V. KRISHNAPPA.—Each Taluk Marketing Society has been entrusted with the work of purchasing of paddy on behalf of Government. If there are any Societies capable of purchasing paddy, we will consider such cases also.

Sri SIDDIAH KASHIMATH.—May I know who is to authorise and who is authorised to supervise and purchase paddy ?

Sri M. V. KRISHNAPPA.—At present District Rationing Officer is the Deputy Commissioner and he deputes Tahsildar to supervise and purchase.

ಶ್ರೀ ಹೆಚ್. ಆರ್. ಕೇಶವಮೂರ್ತಿ.—ತಾವು ಭತ್ತ ಕೊಳ್ಳುವಾಗ ಸಿಗುವುದು ಬರೀ ಹಸೀ ಭತ್ತ. ಇಂತಹ ಹಸೀ ಭತ್ತವನ್ನು ಎಂಗಡಿಸುವುದಕ್ಕೆ ಏನಾದರೂ ವ್ಯವಸ್ಥೆ ಮಾಡಿದ್ದೀರಾ ?

ಶ್ರೀ ಎಂ. ವಿ. ಕೃಷ್ಣಪ್ಪ.—ಇದರೊಳಗೆ ನಾವೇನು ಪ್ರೋಗ್ರಾಂ ಹಾಕಿದ್ದೆವೋ ಅದರಂತೆ ಪ್ರೊಕ್ಯೂರ್ಮೆಂಟು ಮಾಡುವುದೂ ಈ ಸಾರಿ ಲೇಟು ಆಯಿತು. ಏನೋ ಅದೃಷ್ಟವಶಾತ್ ನಾವು ಕೊಳ್ಳುವ ಹೊತ್ತಿಗೆ ಹಸೀ ಭತ್ತ ಹೋಗಿ ಒಣಗಿದ ಭತ್ತ ಸಿಗಲು ಅವಕಾಶವಾಯಿತು. ಮೊದಲಿಗೆ ಇದರ ಮೇಲೆ ಲೆವಿ ಹಾಕಬೇಕೆಂದು ಇದ್ದುದು ಹಾಗೂ ಇನ್ನಿತರ ಸಮಸ್ಯೆಗಳು ಮಧ್ಯದಲ್ಲಿ ಬಂದು ಸ್ವಲ್ಪ ತೊಂದರೆಯಾದುದರಿಂದ ವಸೂಲಿ ಕೆಲಸ ಸ್ವಲ್ಪ ನಿಧಾನವಾಯಿತು. ಆಗ ಹೊಸ ಭತ್ತವನ್ನು ತೆಗೆದುಕೊಂಡು ಶೇಖರಣೆ ಮಾಡಲು ಕಷ್ಟವೇನೂ ಆಗಲಿಲ್ಲ. ನಾವು ಜನವರಿ ತಿಂಗಳಲ್ಲೇ ವಸೂಲಿ ಮಾಡಬೇಕಾಗಿತ್ತು. ಆದರೆ ಮೂರು ತಿಂಗಳು ಮುಂದಕ್ಕೆ ಹೋದುದರಿಂದಾಗಿ ಅನುಕೂಲವಾಯಿತು. ಮೊದಲೇ ವಸೂಲು ಮಾಡಿದ್ದರೆ ಹಸೀ ಭತ್ತವನ್ನು ಎಂಗಡಣೆ ಮಾಡಬೇಕಾಗಿತ್ತು. ಅದು ಈಗ ತಪ್ಪಿದೆ.

Increasing the Boarding Grant in Government Aided Hostels for Scheduled Castes and Tribes, etc.

*Q.—657. Sri G. V. GOWDA (Palyam).—

Will the Government be pleased to state :—

(*a*) whether they are aware that the boarding grant of Rs. 18 per boarder in Government aided hostels for Scheduled Castes, Scheduled Tribes and other Backward Classes is too inadequate ;

(*b*) whether they would take an early decision to increase the same with retrospective effect from 1-4 1964 ?

A.—Smt. YASHODARA DASAPPA (Minister for Social Welfare).—

(*a*) Yes.

(*b*) Orders have been issued on 25-2-1965 enhancing the boarding charges from Rs. 18 to Rs. 20 in respect of Government Hostels and Residential Schools. The question of extending the same to aided hostels also is under consideration.

ಶ್ರೀ ಜಿ. ವಿ. ಗೌಡ.—ನರ್ಕಾರದವರು ಬೋರ್ಡಿಂಗು ವೆಚ್ಚಕ್ಕಾಗಿ 18 ರೂಪಾಯಿಗಳಷ್ಟು ಕೊಡುತ್ತಿರುವುದು ಪರಿಹಾರ ಬಹಳ ಕಡಿಮೆ ಎಂದು ನರಕಾರಕ್ಕೆ ಗೊತ್ತಿಲ್ಲವೆ ?

† ಶ್ರೀಮತಿ ಯಶೋಧರ ದಾನಪ್ಪ.—ನರಕಾರದ ಹಾಸ್ಟಲುಗಳಲ್ಲಿ ಪ್ರತಿಯೊಬ್ಬರಿಗೂ 20 ರೂಪಾಯಿಗಳಷ್ಟು ಕೊಡಬೇಕೆಂದು ಮಾಡಿರುವುದರಿಂದಲೇ ನರಕಾರಕ್ಕೆ ಇಲ್ಲರುವ 24,917 ವಿದ್ಯಾರ್ಥಿಗಳಿಗಾಗಿ ನುಮಾರು 10,050 ಹಾಸ್ಟಲ್ಲುಗಳಿಗೆ ಅಂದಾಜು ಮಾಡಿರುವಂತೆ ನುಮಾರು 4,43,500 ರೂಪಾಯಿಗಳಷ್ಟು ಖರ್ಚಾಗುತ್ತದೆ. ಈಗ 20 ರೂಪಾಯಿಗಳಂತೆ ಹೆಚ್ಚು ಮಾಡಿರುವುದರಿಂದಲೇ ನುಮಾರು ಮೂರು ನಾಲ್ಕರಷ್ಟು ಹೆಚ್ಚು ಕೊಟ್ಟಂತೆ ಆಗುತ್ತದೆ.

ಶ್ರೀ ಜಿ. ವಿ. ಗೌಡ.—ಬೋರ್ಡಿಂಗ್ ಚಾರ್ಜನ್ 20 ರೂಪಾಯಿ ನರಕಾರ ಹಾಸ್ಟೆಲ್ಲಗೆ ಮಾಡಿರುವುದನ್ನು ಏಡೆಡ್ ಹಾಸ್ಟೆಲ್ಲುಗಳಿಗೆ ಯಾವಾಗ ಅನ್ವಯಿನುತ್ತೀರಿ ?

ಶ್ರೀಮತಿ ಯಶೋಧರ ದಾನಪ್ಪ.—ಏಡೆಡ್ ಹಾಸ್ಟೆಲ್ಲುಗಳಿಗೆ ಅನ್ವಯಿನುವುದು ಇನ್ನೂ ಮಾಡುವುದಕ್ಕೆ ನಾಧ್ಯವಾಗಿಲ್ಲ. ಹಣದ ಅನುಕೂಲತೆ ನೋಡಿಕೊಂಡು ಮುಂದೆ ಮಾಡಲು ಪ್ರಯತ್ನ ಮಾಡುತ್ತೇನೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಪ್ರತಿವರ್ಷ ಹಾಸ್ಟೆಲುಗಳಲ್ಲಿ ವಿದ್ಯಾರ್ಥಿಗಳ ನಂಖ್ಯೆ ಹೆಚ್ಚಾಗುತ್ತಿದೆ. ಹಾಸ್ಟೆಲ್‌ಗಳೂ ಜಾನ್ತಿಯಾಗಬೇಕಾಗಿದೆ. ಆದುದರಿಂದ ಕೊಡತಕ್ಕ ಹಣ ಜಾನ್ತಿ ಮಾಡುವುದಕ್ಕಾಗುವುದಿಲ್ಲವೆ ?

ಶ್ರೀಮತಿ ಯಶೋಧರ ದಾನಪ್ಪ.—ಈಗಾಗಲೇ 800-900 ಮಕ್ಕಳನ್ನು ಹಾಸ್ಟೆಲನಲ್ಲಿ ತೆಗೆದುಕೊಂಡಲ್ಲ ನಹ ಹಣ ಕೊಡುತ್ತಿದ್ದೇವೆ. ಮುಂದೆ ಹೆಚ್ಚು ಮಕ್ಕಳನ್ನು ಬೋರ್ಡಿಂಗ್‌ನಲ್ಲಿ ತೆಗೆದುಕೊಳ್ಳಲು ಹಣ ಕೊಡುತ್ತೇವೆ.

ಶ್ರೀ ಜಿ. ವಿ. ಗೌಡ.—ಈಗ ಆಹಾರ ಧಾನ್ಯಗಳ ಬೆಲೆ ಧಾರಣೆವಾಸಿ ಜಾನ್ತಿಯಾಗಿರುವುದರಿಂದ ಖಾನಗಿ ಹಾಸ್ಟರ್ ನಡೆನತಕ್ಕ ಆಡಳಿತ ವರ್ಗಕ್ಕೆ ಹೆಚ್ಚು ಖರ್ಚು ಮಾಡಬೇಕಾಗಿದೆ. ಅವರಿಗೆ ನಹಾಯವಾಗುವ ರೀತಿಯಲ್ಲಿ ಏನಾದರೂ ಮಾಡುತ್ತೀರಾ ?

ಶ್ರೀಮತಿ ಯಶೋಧರ ದಾನಪ್ಪ.—ಏಡೆಡ್ ಇನ್‌ನ್ಟಿಟ್ಯೂಷನ್‌ಗಳಿಗೆ ಕೊಡತಕ್ಕದ್ದು ನಬ್ಸಿಡಿ ರೂಪದಲ್ಲಿ ಕೊಡಬೇಕಾಗುತ್ತದೆ. ನರ್ಕಾರದವರು ಕೊಡತಕ್ಕಂಥ ಹಣಕ್ಕೆ ಮ್ಯಾಜಿಂಗ್ ಗ್ಯಾರಂಟಿ ಕಂಡು ಹಿಡಿಯಬೇಕಾಗಿದೆ. ಈ ಧಾರಣೆವಾಸಿಯು ಕಷ್ಟನಷ್ಟ ಎಲ್ಲರಿಗೂ ಇದೆ. ಏಡೆಡ್ ಹಾಸ್ಟರ್‌ಗಳಿಗೆ ಕೊಡಬೇಕಾದರೆ ನಾಲ್ಕೈದು ಲಕ್ಷ ರೂಪಾಯಿ ಆಗುತ್ತದೆ. ಇದನ್ನು ಯೋಚನೆ ಮಾಡಬೇಕಾಗುತ್ತದೆ.

ಶ್ರೀ ಸುಬ್ಬಯ್ಯ ನಾಯಕ್.—ನರಕಾರಿ ಹಾಸ್ಟೆಲ್ಲುಗಳಿಗೆ ಹೆಚ್ಚು ಹಣ ಕೊಡಬೇಕೆಂದು ಮಾಡಿರುವುದನ್ನು ಯಾವ ತಿಂಗಳಿನಿಂದ ಜಾರಿ ಮಾಡಿಕೊಡುತ್ತೀರಿ ?

ಶ್ರೀಮತಿ ಯಶೋಧರ ದಾನಪ್ಪ.—ಈ ವರ್ಷ ಏಪ್ರಿಲ್ ತಿಂಗಳಿನಿಂದ ಕೊಡುತ್ತೇವೆ.

ಶ್ರೀ ವೀರಭದ್ರಪ್ಪ ಈರಪ್ಪ.—ಕೆಲವೊಂದು ಹಾಸ್ಟೆಲ್ಲುಗಳಲ್ಲಿ ನರಕಾರದಿಂದ ಪಡೆಯುವ ಹಣವನ್ನು ದುರುಪಯೋಗಪಡಿಸಿಕೊಂಡಿರುತ್ತಾರೆ ಎಂಬುದು ನರಕಾರದ ಗಮನಕ್ಕೆ ಬಂದಿದೆಯೆ ?

ಶ್ರೀಮತಿ ಯಶೋಧರ ದಾನಪ್ಪ.—ಬೇಕಾದಷ್ಟು ಬಂದಿದೆ.

ಶ್ರೀ ವೀರಭದ್ರಪ್ಪ ಈರಪ್ಪ.—ಇದರ ಬಗ್ಗೆ ಏನಾದರೂ ಕ್ರಮ ತೆಗೆದುಕೊಂಡಿದ್ದೀರಾ ?

ಶ್ರೀಮತಿ ಯಶೋಧರ ದಾನಪ್ಪ.—ಏಡೆಡ್ ಹಾಸ್ಟರ್‌ಗೆ ಕೊಡುವ ಹಣ ನಿಲ್ಲಿನಿದೆ. ಹಾಗೂ ಅವುಗಳನ್ನು ನರಕಾರಿ ಹಾಸ್ಟರ್ ಆಗಿ ಪರಿವರ್ತನೆ ಮಾಡಲು ಏರ್ಪಾಡು ಮಾಡುತ್ತೇವೆ. ಎಲ್ಲಿಯಾ ಹಣ ದುರುಪಯೋಗವಾದುದು ತಮಗೆ ಕಂಡು ಬಂದಿದ್ದರೆ ತವು ಅದನ್ನು ನರಕಾರದ ಗಮನಕ್ಕೆ ತಂದರೆ ಹಣ ಕೊಡುವುದನ್ನು ನಿಲ್ಲಿನುತ್ತೇವೆ.

ಶ್ರೀ ಜಿ. ವಿ. ಗೌಡ.—ಏಡೆಡ್ ಹಾಸ್ಟೆಲ್‌ಗಳಿಗೆ ಮ್ಯಾನೇಜ್‌ಮೆಂಟ್ ಎನ್ಯಾಬ್ಲಷ್‌ಮೆಂಟಿಗಾಗಿ ಪ್ರತ್ಯೇಕವಾಗಿ ಯಾವ ಗ್ರ್ಯಾಂಟ್ ಕೊಡುವುದಿಲ್ಲ. ಇದರಿಂದ ಕಷ್ಟವಾಗುತ್ತದೆ. ಆದುದರಿಂದ ಹಣ ಕೊಡುವುದನ್ನು ಏನಾದರೂ ಹೆಚ್ಚಿನುವುದಕ್ಕೆ ಯೋಚನೆ ಮಾಡುತ್ತೀರಾ ?

ಶ್ರೀಮತಿ ಯಶೋಧರ ದಾಸಪ್ಪ.—ಸರಕಾರದ ಅನುಮೋದನೆ ಪಡೆದು ಸಂಖ್ಯೆ ಹೆಚ್ಚಿಸಿದಂಥ ಮಕ್ಕಳಿಗೆ ಹಣ ಕೊಡುತ್ತೇವೆ. ಆದರೆ 50-60 ಜನ ಹುಡುಗರು ಹೆಚ್ಚಾಗಿದ್ದಾರೆ ಎಂದು ಅಂದರೆ ಆದು ಆಗುವುದಿಲ್ಲ. ಸ್ಟೆಂಗ್ತ್ ಎಷ್ಟು ಇದೆ, ಮಕ್ಕಳು ಎಷ್ಟು ಇದ್ದಾರೆ ಎನ್ನುವ ವಿವರ ಮೇಲಾಧಿಕಾರಿಗಳಿಗೆ ತಿಳಿಸಿ ಅವರ ಅನುಮತಿ ಪಡೆದು ಮಾಡಿದ್ದರೆ ಸರಕಾರ ಹೆಚ್ಚು ಹಣ ಕೊಡುವುದು ಸಾಧ್ಯ ವಿದೆ.

ಶ್ರೀ ಜಿ. ವಿ. ಗೌಡ.—ಮಕ್ಕಳ ವಿದ್ಯಾಭ್ಯಾಸಕ್ಕೆ ತೊಂದರೆಯಾಗದ ಹಾಗೆ ಪ್ರತಿಯೊಬ್ಬರಿಗೆ 20 ರೂಪಾಯಿ ಎಲ್ಲ ಹಾಸ್ಟೆಲ್‌ಗಳಿಗೆ ಅನ್ವಯಿಸಿ ಜಾರಿಗೆ ಕೊಡುತ್ತೀರಾ ?

ಶ್ರೀಮತಿ ಯಶೋಧರ ದಾಸಪ್ಪ.—ಹಣ ನೋಡಿಕೊಂಡು ವಿದ್ಯಾಭ್ಯಾಸಕ್ಕೆ ಹೆಚ್ಚು ಮಾಡುವು ದಾದರೆ ಹಣವನ್ನು ಅಗತ್ಯವಾಗಿ ಕೊಡುತ್ತೇವೆ.

ಶ್ರೀ ಗೋಪಾಲ ಸಾಲೆನ್ನ.—ಹಾಸ್ಟಲ್‌ಗಳಿಗೆ ಸಕಾಲದಲ್ಲಿ ಹಣ ದೊರೆಯದೆ ವಿದ್ಯಾರ್ಥಿಗಳಿಗೆ ತೊಂದರೆಯಾಗಿದೆ. ಆದುದರಿಂದ ಇಂಥ ಎಲ್ಲ ಹಾಸ್ಟಲ್‌ಗಳನ್ನು ಸರಕಾರದವರೇ ತೆಗೆದುಕೊಂಡು ಹಾಸ್ಟಲ್‌ಗಳನ್ನು ಮುಂದುವರಿಸುವುದಕ್ಕೆ ಯೋಚನೆ ಮಾಡುತ್ತೀರಾ ?

ಶ್ರೀಮತಿ ಯಶೋಧರ ದಾಸಪ್ಪ.—ಯಾವ ಯಾವ ಕಡೆ ಗ್ರ್ಯಾಂಟ್-ಇನ್-ಏಡ್ ಹಾಸ್ಟಲ್‌ಗಳು ಸರಿಯಾದ ರೀತಿಯಲ್ಲಿ ನಡೆಯದೆ ಹಣ ದುರುಪಯೋಗವಾದುದು ಕಂಡುಬಂದರೆ ಅಲ್ಲಿಯ ಮಕ್ಕಳನ್ನು ಗವರ್ನಮೆಂಟ್ ಹಾಸ್ಟೆಲ್ಲಿಗೆ ಸೇರಿಸುವುದಕ್ಕೆ ಅನುಮತಿ ಕೊಡುತ್ತೇವೆ. ಹೆಚ್ಚಾಗಿ ವಿದ್ಯಾರ್ಥಿಗಳು ಬಂದರೆ ವಿದ್ಯಾಭ್ಯಾಸಕ್ಕೆ ತೊಂದರೆಯಾಗದಂತೆ ನೋಡಿಕೊಳ್ಳುತ್ತೇವೆ.

ಶ್ರೀ ಟಿ. ಡಿ. ದೇವೇಂದ್ರಪ್ಪ.—ಹಿಂದುಳಿದ ವಿದ್ಯಾರ್ಥಿಗಳಿಗಾಗಿ ಇರುವ ಭದ್ರಾವತಿಯಲ್ಲಿಯ ಬಾಪೂಜಿ ಹಾಸ್ಟೆಲ್ಲು ಬಂದಾಗಿ ಆರು ತಿಂಗಳಾಯಿತು. ಮೂರು ವರ್ಷದಿಂದ ಗ್ರ್ಯಾಂಟ್ ಕೊಡದೆ ವಿದ್ಯಾರ್ಥಿಗಳಿಗೆ ತೊಂದರೆಯಾಗಿದೆ. ಸರಕಾರ ಇದರ ಬಗ್ಗೆ ಗಮನ ಕೊಟ್ಟು ಏನಾದರೂ ಕಾರ್ಯ ಕ್ರಮ ತೆಗೆದುಕೊಳ್ಳುತ್ತಾರೆಯೇ ?

ಶ್ರೀಮತಿ ಯಶೋಧರ ದಾಸಪ್ಪ.—ಹಾಸ್ಟೆಲ್ ಬಂದಾಗಿದೆ ಎಂದು ಅನೇಕ ರೆಪ್ರೆಸೆಂಟೇಷನ್ಸ್ ಕೊಟ್ಟಿದ್ದಾರೆ. ಸರಕಾರ ಕೇಳತಕ್ಕಂಥ ಆಡಿಟ್ ರಿಪೋರ್ಟ್ ಒದಗಿಸಿಕೊಟ್ಟು ಅದರ ಮೇಲೂ ಸರಕಾರ ಹಣ ಕೊಡದೇ ಇದ್ದರೆ ಅಂಥಾದ್ದನ್ನು ಸರಕಾರದ ಗಮನಕ್ಕೆ ತಂದರೆ ಖಂಡಿತವಾಗಿ ಪರಿಶೀಲನೆ ಮಾಡುತ್ತೇವೆ. ಮೂರು ನಾಲ್ಕು ವರ್ಷದಿಂದ ಹಾಸ್ಟೆಲ್ ನಿಂತು ಹೋಗಿದೆ ಎಂದು ಹೇಳುತ್ತಾರೆ. ಆದರೆ ಈ ವಿಷಯಕ್ಕೆ ಸಂಬಂಧಪಟ್ಟ ವಿವರ ಕೇಳಿದರೆ ಉತ್ತರ ಸರಿಯಾಗಿ ಬಾರದೇ ಇರುವುದರಿಂದ ಹಣ ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ.

ಶ್ರೀ ಟಿ. ಡಿ. ದೇವೇಂದ್ರಪ್ಪ.—ಮೂರು ವರ್ಷದಿಂದ ಕಷ್ಟವಾಗಿದೆ ಗ್ರ್ಯಾಂಟ್ ಬಂದಿಲ್ಲ. ರಿಕಾರ್ಡ್ ಓಡಾಡಿಸುತ್ತಿದ್ದಾರೆ. ರಿಕಾರ್ಡನ್ನು ಪರಿಶೀಲನೆ ಮಾಡಿ ತಮ್ಮ ಅನುಭವದಿಂದ ತಿಳಿದು ಕೊಂಡು ಕ್ರಮ ತೆಗೆದುಕೊಳ್ಳುತ್ತೀರ್ರಾ ? ಮಕ್ಕಳಿಗೆ ಓದುವುದಕ್ಕೆ, ಊಟಕ್ಕೆ ತೊಂದರೆಯಾಗದ ಹಾಗೆ ಮೂರು ವರ್ಷದ ಗ್ರ್ಯಾಂಟ್ ತಕ್ಷಣ ಕಳಿಸಿ ಹಾಸ್ಟೆಲ್ ನಡೆಸುವುದಕ್ಕೆ ಅನುಕೂಲ ಕಲ್ಪಿಸಿ ಕೊಡುತ್ತೀರ್ರಾ ?

ಶ್ರೀಮತಿ ಯಶೋಧರ ದಾಸಪ್ಪ.—ಮಕ್ಕಳಿಗೆ ತೊಂದರೆಯಾಗದ ಹಾಗೆ ಮಾಡುವುದು ಸರಕಾರದ ಪ್ರಥಮ ಕರ್ತವ್ಯ. ತಾವು ಕಾಗದ ಬರೆಯಬಹುದು, ತಾವು ಮೆಂಬರ್ ಆಗಿದ್ದೀರಿ. ಇವತ್ತಿನ ದಿವಸವೇ ಡೈರೆಕ್ಟರರನ್ನು ಕರೆಸಿ ಏನು ತೊಂದರೆಯಾಗಿದೆ, ರಿಕಾರ್ಡನಲ್ಲಿ ಏನಿದೆ ಎಂಬುದಕ್ಕೆ ತಾವು ಇವತ್ತು 3 ಗಂಟೆಗೆ ನನ್ನ ಚೇಂಬರಿಗೆ ಬಂದರೆ ಡೈರೆಕ್ಟರರನ್ನು ಕೇಳಿ ಸರಿಪಡಿಸುತ್ತೇನೆ.

Sri J. P. SARVESH.—Is there any proposal to transfer all those Hostels to the Education Department ?

ಶ್ರೀಮತಿ ಯಶೋಧರ ದಾಸಪ್ಪ.—ಇಲ್ಲ. ಬರುವುದಿಲ್ಲ. ಸೋಷಿಯಲ್ ವೆಲ್‌ಫೇರ್ ಬೋರ್ಡಿನಿಂದ ಎಜ್ಯುಕೇಷನ್ ಡಿಪಾರ್ಟ್‌ಮೆಂಟಿಗೆ ಹಾಸ್ಟೆಲ್‌ಗಳನ್ನು ಕೊಟ್ಟುಬಿಟ್ಟು ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟ್ ತೆಗೆದು ಹಾಕಿ ಬಿಡಿ ಎಂದು ಹೇಳುತ್ತಾರೆ. ಹರಿಜನ ಗಿರಿಜನರ ಅಭಿವೃದ್ಧಿಗಾಗಿ ಸ್ಪೆಷಲ್ ಆಗಿ ನೋಡಿಕೊಳ್ಳತಕ್ಕಂಥ ಪ್ರತ್ಯೇಕವಾದ ಸಿಬ್ಬಂದಿ ಇಟ್ಟುಕೊಂಡು ಕೆಲಸ ಮಾಡತಕ್ಕಂಥ ಈ ಜವಾಬ್ದಿಯನ್ನು ಬೇರೆಯವರಿಗೆ ಕೊಡುವುದಿಲ್ಲ. ಇದನ್ನು ಆದಷ್ಟು ಶಿಸ್ತು ನಿಯಮಗಳಿಂದ ಮಕ್ಕಳನ್ನು ಬಹಳ ಚೆನ್ನಾಗಿ ನೋಡಿಕೊಂಡು ವಿದ್ಯಾಭ್ಯಾಸದ ಕಡೆಗೆ ಗಮನ ಕೊಟ್ಟು ಕೆಲಸ ಮಾಡಬೇಕಾಗಿರುವುದರಿಂದ ಈ ಜವಾಬ್ದಿ ಕೊಡುವುದಿಲ್ಲ ಎಂದು ಹೇಳುತ್ತೇನೆ.

ಶ್ರೀ ಗೋಪಾಲ ಸಾಲೆನ್ನ.—ಕೊಡತಕ್ಕಂಥ ಹಣವನ್ನು ಜಾಗ್ರತೆ ನ್ಯಾಕ್ಷನ್ ಮಾಡಲಕ್ಕೆ ಏನಾದರೂ ರೂಲ್ಸ್ ತಯಾರು ಮಾಡುತ್ತೀರಾ ?

ಶ್ರೀಮತಿ ಯಶೋಧರ ದಾಸಪ್ಪ.—ಉತ್ತೇಜನ ಕೊಡಬೇಕೆಂದು ಇರುವುದನ್ನು ಹಿಂದೆ ತೆಗೆಯುವುದಿಲ್ಲ. ಕಾನೂನು ಕಟ್ಟಳೆ ಪ್ರಕಾರ ಮಕ್ಕಳನ್ನು ನೋಡಿಕೊಳ್ಳಬೇಕಾಗುತ್ತದೆ. 18-20 ರೂಪಾಯಿ ವೆಚ್ಚ ಸಾಕಾಗುವುದಿಲ್ಲ ಎಂಬುದು ಗಮನಕ್ಕೆ ಬಂದಿದೆ. ಹಣದ ಅಭಾವದಿಂದ ಕಡಮೆ ಕೊಡುತ್ತೇವೆ.

ಶ್ರೀ ವೀರಭದ್ರಪ್ಪ ಈರಪ್ಪ.—ಕೊಪ್ಪಳದಲ್ಲಿರುವ "ಗುರುಪ್ರಸಾದ ನಿಲಯ" ಎಂಬ ಬೋರ್ಡಿಂಗಿನ ಅಧ್ಯಕ್ಷರು ಮತ್ತು ಕಾರ್ಯದರ್ಶಿಗಳು ದುಡ್ಡು ತೆಗೆದುಕೊಂಡು ಓಡಿ ಹೋಗಿದ್ದಾರೆ ಎಂಬುದು ಸರಕಾರದ ಗಮನಕ್ಕೆ ಬಂದಿದೆಯೇ ?

ಶ್ರೀಮತಿ ಯಶೋಧರ ದಾಸಪ್ಪ.—ತಾವು ಆ ಸ್ಥಳದ ಸದಸ್ಯರಾಗಿದ್ದೀರಿ, ತಾವು ಸರಕಾರದ ಗಮನಕ್ಕೆ ತಂದರೆ ಅಂಥವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ. ದುಡ್ಡು ತೆಗೆದುಕೊಂಡು ಹೋದುದು ಗಮನಕ್ಕೆ ಬಂದಿಲ್ಲ. ತಾವು ಈಗ ಹೇಳಿರುವುದರಿಂದ ವರದಿ ತರಿಸಲು ಪ್ರಯತ್ನ ಮಾಡುತ್ತೇನೆ.

ಶ್ರೀ ಗೋಪಾಲ ಸಾರೆನ್ನ.—ಮ್ಯಾನೇಜಮೆಂಟಿನಲ್ಲಿ ಅವ್ಯವಸ್ಥೆ ಇದೆ ಎಂದು ರಿಪೋರ್ಟ್ ಬಂದರೆ ತೀವ್ರವಾಗಿ ತನಿಖೆ ನಡೆಸಿ ಇಂಥ ಕಾರ್ಯಾಚರಣೆಯನ್ನು ಡಿಸ್-ಕರೇಜ್ ಮಾಡುವುದಕ್ಕೆ ಸರಕಾರ ನೂಕ್ಕ ಕ್ರಮ ತೆಗೆದುಕೊಳ್ಳುತ್ತಾರೆಯೇ ?

ಶ್ರೀಮತಿ ಯಶೋಧರ ದಾಸಪ್ಪ.—ಇಲ್ಲ್ಲೇ ಅಲ್ಲ ಕೆಲವು ಹಾಸ್ಟೆಲ್‌ಗಳಲ್ಲಿ ತಮ್ಮ ತಮ್ಮ ಮನೆಯಲ್ಲಿ ಇರತಕ್ಕಂಥ ಮಕ್ಕಳನ್ನು ಸಂಬಂಧಪಟ್ಟ ಅಧಿಕಾರಿಗಳು ಸೇರಿಸಿ ಹಾಸ್ಟೆಲ್ ಮಾಡಿದೆ ಎಂದು ಹೇಳತಕ್ಕಂಥ ಉದಾಹರಣೆ ಸರಕಾರದ ಗಮನಕ್ಕೆ ಬಂದಿದೆ. ಆದುದರಿಂದ ತಾವು ಹೇಳಿದ್ದನ್ನು ಕೂಲಂಕಷವಾಗಿ ಪರಿಶೀಲಿಸಿ ನೋಡುತ್ತೇವೆ; ಆ ಮೇಲೆ ಗ್ಯಾರಂಟಿ ಕೊಡುತ್ತೇವೆ, ಬೋಗಸ್ ಹಾಸ್ಟೆಲ್ ಮಾಡಿದ್ದಕ್ಕೆ ಮಾತ್ರ ಖಂಡಿತವಾಗಿ ಉತ್ತೇಜನ ಕೊಡುವುದಿಲ್ಲ ಎಂದು ಹೇಳುತ್ತೇನೆ.

ಶ್ರೀ ಗೋಪಾಲರಾವ್ ಮುಡ್ಡಿ.— ಬೀದರ್ ಜಿಲ್ಲೆಯಲ್ಲಿ ಈ ಬ್ಯಾಕ್ವರ್ಡ್ ಕ್ಲಾಸಸ್ ಹಾಸ್ಟಲುಗಳಿಗೆ ಓಪನ್ ಟೆಂಡರುಗಳ ಮೂಲಕ ಧಾನ್ಯಗಳನ್ನು ಖರೀದಿ ಮಾಡುವುದುಂಟು. ಆದರೆ ಅವರಿಗೆ ಅಲ್ಲಿ ಕೆಲವು ವೇಳೆ ಅನ್ನ, ಬೇಳೆ ಸಾರು ಸಿಕ್ಕುವುದೇ ಬಹಳ ಕಷ್ಟವಾಗಿದೆ. ಆದ್ದರಿಂದ ಅವರಿಗೆ ಅಲ್ಲಿ ಅಗತ್ಯವಾಗಿ ಬೇಕಾದಂಥ ಗೋಧಿ, ಜೋಳ ಮತ್ತು ಸಕ್ಕರೆ ಇತ್ಯಾದಿ ಸಾಮಾನುಗಳನ್ನು ಒದಗಿಸುವುದಕ್ಕೆ ಸರ್ಕಾರದವರು ನೂಕ್ಕ ಪ್ರಯತ್ನಗಳನ್ನು ನಡೆಸುವರೇ ?

ಶ್ರೀಮತಿ ಯಶೋಧರ ದಾಸಪ್ಪ.—ಅಲ್ಲಿ ಯಾವುದಾದರೂ ಕೋ-ಆಪರೇಟೀವ್ ಸೊಸೈಟಿಗಳಿದ್ದರೆ, ಅವುಗಳ ಮೂಲಕ ಆ ಸಾಮಾನುಗಳನ್ನು ತರಿಸಿಕೊಡಲು ನಾವು ಡೆಪ್ಯುಟೀಕಮಿಷನರಿಗೆ ಬರೆದು ಆ ಅನುಕೂಲವನ್ನು ಕಲ್ಪಿಸಿಕೊಡುತ್ತೇವೆ.

Mr. SPEAKER.—Question hour is over.

QUESTIONS FOR ANSWERS ON THE DAY

(but not taken up)

Testing of the Samples of earth in Tungabhadra Ayacut Area

*Q.—416. Sri C. M. REVANASIDDAIAH (Siruguppa).—

Will the Government be pleased to state :—

(*a*) whether they have tested the samples of earth of the ayacut area of Tungabhadra Project on the Bellary side ;

(*b*) whether they have advised the ryots to use suitable fertilisers to the various kinds of soils in the said area for better crops ?